ನ್ಯಾಕ್ ಎ+ ಮಾನ್ಯತೆ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
UNIVERSITY OF AGRICULTURAL SCIENCES, BANGALORE

ಐ.ಸಿ.ಎ.ಆರ್. – ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ತಾಲ್ಲೂಕು, ತುಮಕೂರು
ICAR - KRISHI VIGYAN KENDRA, KONEHALLI, TIPTUR TQ, TUMAKURU

ಕಲ್ಪವೃಕ್ಷ

e - NEWS LETTER /ಇ –ವಾರ್ತಾ ಪತ್ರಿಕೆ

ಸಂಪುಟ: 18 | ಜುಲೈ – ಸೆಪ್ಟೆಂಬರ್ 2026 | ಸಂಚಿಕೆ : 3

ವಿಸ್ಮಯ ಕೀಟ ಪ್ರಪಂಚ – ಕೀಟ ವೈವಿಧ್ಯತೆ ಕುರಿತು ಜಾಗೃತಿ ಕಾರ್ಯಕ್ರಮ





ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು, ಕೃಷಿ, ತೋಟಗಾರಿಕೆ ಹಾಗೂ ತುಮಕೂರು ಜಿಲ್ಲೆಯ ಇತರೆ ಅಭಿವೃದ್ಧಿ ಇಲಾಖೆಗಳು ಮತ್ತು ಕಲ್ಪತರು ಶಿಕ್ಷಣ ಸಂಸ್ಥೆ, ತಿಪಟೂರು ಇವರ ಸಹಯೋಗದಲ್ಲಿ ದಿನಾಂಕ 30/07/2026 ರಿಂದ 31/07/2026 ರವರಗೆ ಎರಡು ದಿನಗಳ "ವಿಸ್ಮಯ ಕೀಟ ಪ್ರಪಂಚ" ಪ್ರದರ್ಶನ ಹಾಗೂ ತಾಂತ್ರಿಕ ವಿಚಾರ ಸಂಕಿರಣವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು. ಈ ಕಾರ್ಯಕ್ರಮವು ರೈತರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಲ್ಲಿ ಕೀಟ ವೈವಿಧ್ಯತೆ, ಜೀವವೈವಿಧ್ಯ ಸಂರಕ್ಷಣೆ ಮತ್ತು ಸುಸ್ಥಿರ ಕೃಷಿ ಕುರಿತು ವೈಜ್ಞಾನಿಕ ಅರಿವು ಮೂಡಿಸುವ ವಿಶಿಷ್ಟ ವೇದಿಕೆಯಾಯಿತು.

ಕಾರ್ಯಕ್ರಮವನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಸ್. ವಿ. ಸುರೇಶ ಅವರು ಉದ್ಘಾಟಿಸಿದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ತಿಪಟೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಎಸ್. ಸದಾಕ್ಷರಿ ಅವರು ವಹಿಸಿ, ಕೃಷಿ ಅಭಿವೃದ್ಧಿ, ಪರಿಸರ ಸಂರಕ್ಷಣೆ ಹಾಗೂ ಜೀವವೈವಿಧ್ಯ ಕಾಪಾಡುವಲ್ಲಿ ಕೀಟಗಳ ಮಹತ್ವವನ್ನು ವಿವರಿಸಿದರು. ರೈತರು ಉಪಯುಕ್ತ ಕೀಟಗಳ ಸಂರಕ್ಷಣೆಗೆ ಆದ್ಯತೆ ನೀಡಿ ವೈಜ್ಞಾನಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು. ವಿದ್ಯಾರ್ಥಿಗಳಲ್ಲಿ ಕೃಷಿ ಹಾಗೂ ವಿಜ್ಞಾನದ ಬಗ್ಗೆ ಆಸಕ್ತಿ ಬೆಳೆಸುವ ಈ ವಿನೂತನ ಕಾರ್ಯಕ್ರಮವನ್ನು ಅವರು ಶ್ಲಾಘಿಸಿದರು.









ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕರು ಹಾಗೂ ಜಿಕೆವಿಕೆ ಕೃಷಿ ಮಹಾವಿದ್ಯಾಲಯದ ಡೀನ್ ಡಾ. ವೈ. ಎನ್. ಶಿವಲಿಂಗಯ್ಯ ಅವರು ವಹಿಸಿ, ಕೃಷಿ ಅಭಿವೃದ್ಧಿಯಲ್ಲಿ ಕೀಟಶಾಸ್ತ್ರದ ಮಹತ್ವವನ್ನು ವಿವರಿಸಿದರು. ವಿಸ್ಮಯ ಕೀಟ ಪ್ರಪಂಚದಂತಹ ಕಾರ್ಯಕ್ರಮಗಳು ರೈತರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಲ್ಲಿ ಜೀವವೈವಿಧ್ಯ ಮತ್ತು ಉಪಯುಕ್ತ ಕೀಟಗಳ ಕುರಿತು ವೈಜ್ಞಾನಿಕ ಅರಿವು ಮೂಡಿಸುವ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡುತ್ತವೆ ಎಂದು ತಿಳಿಸಿದರು. ಕೃಷಿ ವಿಜ್ಞಾನ ಕೇಂದ್ರಗಳು ಕೃಷಿ ತಂತ್ರಜ್ಞಾನಗಳನ್ನು ರೈತರಿಗೆ ತಲುಪಿಸುವಲ್ಲಿ ವಹಿಸುತ್ತಿರುವ ಪಾತ್ರವನ್ನು ಅವರು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಡಾ. ಶಿವಣ್ಣ, ಡಾ. ರಾಜಣ್ಣ, ಡಾ. ಪ್ರಭು ಸಿ. ಗಣಿಗೇರ, ಡಾ. ಮುರಳಿ ಮೋಹನ್, ಡಾ. ಸುನೀತಾ, ಡಾ. ಮಂಜುನಾಥ್ ಹಾಗೂ ಡಾ. ರಾಜೇಂದ್ರ ಪ್ರಸಾದ್ ಅವರು ತಾಂತ್ರಿಕ ಉಪನ್ಯಾಸಗಳನ್ನು ನೀಡಿದರು. ಜೊತೆಗೆ ಶೆಟ್ಟಿಕೆರೆಯ ಪ್ರಗತಿಪರ ರೈತರಾದ ಶ್ರೀ ಅರುಣ್ ಕುಮಾರ್ ಅವರು ತಮ್ಮ ಅನುಭವಗಳನ್ನು ಹಂಚಿಕೊಂಡರು.

ಪ್ರದರ್ಶನದ ಪ್ರಮುಖ ಆಕರ್ಷಣೆಯಾಗಿ ಸಾವಿರಾರು ಅಪರೂಪದ ಕೀಟ ಮಾದರಿಗಳನ್ನು ಪ್ರದರ್ಶಿಸಲಾಯಿತು. ವರ್ಣರಂಜಿತ ಚಿಟ್ಟೆಗಳು, ಜೇನುನೊಣಗಳು, ವಿವಿಧ ಜಾತಿಯ ಜೀರುಂಡೆಗಳು, ಮಿಡತೆಗಳು, ಕಡ್ಡಿ ಕೀಟಗಳು, ಕೀಟಗಳ ಜೀವನಚಕ್ರ ಮಾದರಿಗಳು ಹಾಗೂ ಕೀಟಗಳ ಪರಿಸರ ಮತ್ತು ಕೃಷಿಯಲ್ಲಿನ ಮಹತ್ವವನ್ನು ವಿವರಿಸುವ ವೈಜ್ಞಾನಿಕ ಪ್ರದರ್ಶನಗಳು ವಿಶೇಷ ಗಮನ ಸೆಳೆದವು. ಕೀಟ ಹಾಗೂ ಪಕ್ಷಿ ಛಾಯಾಚಿತ್ರ ಗ್ಯಾಲರಿ ಪ್ರಕೃತಿಯ ಸೌಂದರ್ಯ ಮತ್ತು ಜೀವವೈವಿಧ್ಯತೆಯನ್ನು ಅನಾವರಣಗೊಳಿಸಿ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಈ ಎರಡು ದಿನಗಳ ಕಾರ್ಯಕ್ರಮದಲ್ಲಿ **4,500**ಕ್ಕೂ ಹೆಚ್ಚು ರೈತರು, ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಭಾಗವಹಿಸಿದ್ದು, ಇದು ಈ ಪ್ರದೇಶದಲ್ಲಿ ಕೀಟ ವೈವಿಧ್ಯತೆ ಮತ್ತು ಸಂರಕ್ಷಣೆ ಕುರಿತು ಆಯೋಜಿಸಲಾದ ಅತ್ಯಂತ ಯಶಸ್ವಿ ಹಾಗೂ ಬೃಹತ್ ಜಾಗೃತಿ ಕಾರ್ಯಕ್ರಮಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ. ಕೀಟಗಳ ಕೃಷಿ, ಪರಿಸರ ಮತ್ತು ಜೀವವೈವಿಧ್ಯ ಸಂರಕ್ಷಣೆಯಲ್ಲಿನ ಅನಿವಾರ್ಯ ಪಾತ್ರದ ಬಗ್ಗೆ ಸಾರ್ವಜನಿಕರಲ್ಲಿ ವೈಜ್ಞಾನಿಕ ಅರಿವು ಮೂಡಿಸುವಲ್ಲಿ ಈ ಕಾರ್ಯಕ್ರಮ ಮಹತ್ವದ ಸಾಧನೆ ಮಾಡಿತು. "ವಿಸ್ಮಯ ಕೀಟ ಪ್ರಪಂಚ" ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ತಿಪಟೂರಿನ ಪ್ರಮುಖ ವಿಸ್ತರಣಾ ಚಟುವಟಿಕೆಗಳಲ್ಲಿ ಒಂದಾಗಿ ಹೊರಹೊಮ್ಮಿದ್ದು, ವೈಜ್ಞಾನಿಕ ಕೃಷಿ ವಿಸ್ತರಣೆ, ಪರಿಸರ ಶಿಕ್ಷಣ ಹಾಗೂ ಸಮುದಾಯ ಜಾಗೃತಿ ಮೂಡಿಸುವಲ್ಲಿ ಮಾದರಿ ಕಾರ್ಯಕ್ರಮವಾಗಿ ವಿಶೇಷ ಗುರುತಿಸಿಕೊಂಡಿದೆ.



ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮ

ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು, ತುಮಕೂರು ಜಿಲ್ಲೆಯ ಆವರಣದ ಕೃಷಿ ತಾಕಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ದಿನಾಂಕ 10/07/2026 ರಂದು ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ. ಶಂಕರ ಎಂ.ಹೆಚ್. ರವರು ಚಾಲನೆ ನೀಡಿ ಮಾತನಾಡಿ, ಪರಿಸರ ಸಂರಕ್ಷಣೆ, ಪಶು ಪಕ್ಷಿಗಳಿಗೆ ಆಹಾರ ಹಾಗೂ ಆಶ್ರಯ ಕಲ್ಪಿಸುವ ನಿಟ್ಟಿನಲ್ಲಿ ಗಿಡಗಳನ್ನು ನೆಟ್ಟು ಅವುಗಳನ್ನು ಸಂರಕ್ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಬೆಣ್ಣೆಹಣ್ಣು, ಗೋಡಂಬಿ, ಮಾವು, ಪರಂಗಿ, ಸೀಬೆ, ಹಲಸು ಸೇರಿದಂತೆ ವಿವಿಧ ಜಾತಿಯ ಸಸಿಗಳನ್ನು ಕೇಂದ್ರದ ಕೃಷಿ ತಾಕಿನಲ್ಲಿ ನೆಡಲಾಯಿತು. ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರ ವಿಜ್ಞಾನಿಗಳಾದ ಡಾ. ದರ್ಶನ್ ಎಂ.ಈ, ಡಾ. ಕೀರ್ತಿಶಂಕರ್ ಕೆ, ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯರಾದ ಹರೀಶ್ ಗೌಡ, ಮಲ್ಲಿಗಪ್ಪಾಚಾರ್, ತಾಲ್ಲೂಕು ಕೃಷಿ ಅಧಿಕಾರಿ ಪ್ರಮೋದ್ ಕುಮಾರ್, ಮೇಲ್ವಿಚಾರಕಿ ರಮ್ಯಾ ಶೆಟ್ಟಿ ಮತ್ತು 200 ರೈತರು ಭಾಗವಹಿಸಿದ್ದರು.





ಶುಂಠಿಯಲ್ಲಿ ಸಮಗ್ರ ಬೆಳೆ ನಿರ್ವಹಣೆಯ ಮುಂಚೂಣಿ ಪ್ರಾತ್ಯಕ್ಷಿಕೆ

ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು, ತುಮಕೂರು ಜಿಲ್ಲೆಯು ಪರಿಶಿಷ್ಟ ಜಾತಿ ಉಪಯೋಜನೆ ಅಡಿಯಲ್ಲಿ ತಿಪಟೂರು ತಾಲ್ಲೂಕಿನ ಬಿದರೇಗುಡಿ ಕಾವಲ್‌ನಲ್ಲಿ "ಶುಂಠಿಯಲ್ಲಿ ಸಮಗ್ರ ಬೆಳೆ ನಿರ್ವಹಣೆಯ ಮುಂಚೂಣಿ ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ದಿನಾಂಕ 20/08/2026 ರಂದು ಹಮ್ಮಿಕೊಳ್ಳಲಾಗಿತ್ತು.



ಈ ಕಾರ್ಯಕ್ರಮದಲ್ಲಿ ತೋಟಗಾರಿಕೆ ವಿಜ್ಞಾನಿಗಳಾದ ಡಾ. ಕೀರ್ತಿಶಂಕರ್ ಕೆ ರವರು ಟೈಕೋಡರ್ಮಾ ಬಯೋ–ಕ್ಯಾಪ್ಸುಲ್ ಮತ್ತು ಶುಂಠಿ ಸ್ಪೆಷಲ್ ಅನ್ನು ರೈತರಿಗೆ ವಿತರಿಸಿ ಟೈಕೋಡರ್ಮಾ ಬಯೋ–ಕ್ಯಾಪ್ಸುಲ್ ಶುಂಠಿಯ ಗೆಡ್ಡೆ ಕೊಳೆ ರೋಗವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ ಮತ್ತು ಶುಂಠಿ ಸ್ಪೆಷಲ್ ಇಳುವರಿ ಹಾಗೂ ಗೆಡ್ಡೆಯ ಗುಣಮಟ್ಟವನ್ನು ಹೆಚ್ಚಿಸುತ್ತದೆ ಎಂದು ತಿಳಿಸಿದರು.

ಹಲಸಿನ ಹಣ್ಣಿನ ಮೌಲ್ಯವರ್ಧನೆ, ಬ್ರಾಂಡಿಂಗ್ ಮತ್ತು ಮಾರುಕಟ್ಟೆ ಕುರಿತಾದ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ

ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು, ತುಮಕೂರು ಜಿಲ್ಲೆಯ ವತಿಯಿಂದ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಸೌಪರ್ಣಿಕಾ ಸ್ವಸಹಾಯ ಸಂಘದ ಸದಸ್ಯರಿಗಾಗಿ ಹಲಸಿನ ಹಣ್ಣಿನ ಮೌಲ್ಯವರ್ಧನೆ, ಬ್ರಾಂಡಿಂಗ್ ಮತ್ತು ಮಾರುಕಟ್ಟೆ ಕುರಿತಾದ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮವನ್ನು ದಿನಾಂಕ 17/08/2026 ರಂದು ಆಯೋಜಿಸಲಾಗಿತ್ತು. ಹಲಸಿನ ಹಣ್ಣಿನ ಮೌಲ್ಯವರ್ಧಿತ ಉತ್ಪನ್ನಗಳ ಮೂಲಕ ಉದ್ಯಮಶೀಲತೆಯ ಅವಕಾಶಗಳ ಬಗ್ಗೆ ಅರಿವು ಮೂಡಿಸುವುದು ಮತ್ತು ಗ್ರಾಮೀಣ ಮಹಿಳೆಯರ ಆದಾಯ ಗಳಿಕೆಯ ಸಾಮರ್ಥ್ಯವನ್ನು ಹೆಚ್ಚಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿತ್ತು. ಈ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಗೃಹ ವಿಜ್ಞಾನಿಗಳಾದ ಕು. ಗಾನವಿ ಬಿ.ಆರ್. ರವರು ಹಲಸಿನ ಹಣ್ಣಿನ ಪಾಪಡ್ ಮತ್ತು ಚಿಪ್ಸ್ ತಯಾರಿಕೆಯ ಕುರಿತು ಪ್ರಾಯೋಗಿಕ ತರಬೇತಿ ಹಾಗೂ ಪದ್ಧತಿ ಪ್ರಾತ್ಯಕ್ಷಿಕೆಯ ಮೂಲಕ ತಿಳಿಸಿಕೊಟ್ಟರು. ಅಲ್ಲದೆ, ಮೌಲ್ಯವರ್ಧಿತ ಉತ್ಪನ್ನಗಳಿಗೆ ಸಂಬಂಧಿಸಿದ ಬ್ರಾಂಡಿಂಗ್, ಪ್ಯಾಕೇಜಿಂಗ್ ಮತ್ತು ಮಾರುಕಟ್ಟೆ ತಂತ್ರಗಳ ಬಗ್ಗೆಯೂ ಮಾಹಿತಿ ನೀಡಿದರು. ಕಾರ್ಯಕ್ರಮದ ಕೊನೆಯಲ್ಲಿ ಸ್ವಚ್ಛವಾದ ಪ್ಯಾಕೇಜಿಂಗ್‌ಗೆ ಅನುಕೂಲವಾಗುವಂತೆ ಮತ್ತು ಉತ್ಪನ್ನಗಳ ಮಾರುಕಟ್ಟೆ ಸಾಮರ್ಥ್ಯವನ್ನು ಹೆಚ್ಚಿಸಲು ರೈತರಿಗೆ ಸೀಲಿಂಗ್ ಯಂತ್ರಗಳು, ಉತ್ಪನ್ನದ ಲೇಬಲ್‌ಗಳು ಮತ್ತು ಪ್ಯಾಕೇಜಿಂಗ್ ಸಾಮಗ್ರಿಗಳನ್ನು ಒದಗಿಸಲಾಯಿತು.













ವಿಶ್ವ ತೆಂಗು ದಿನಾಚರಣೆ

ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು, ತುಮಕೂರು ಜಿಲ್ಲೆಯು ಹೆಚ್.ಆರ್.ಇ.ಸಿ. ಅರಸೀಕೆರೆ, ವಿವಿಧ ಸಂಸ್ಥೆಗಳು, ಕಂಪನಿಗಳು, ಕೃಷಿ ಸಂಬಂಧಿತ ಇಲಾಖೆಗಳು ಮತ್ತು ಸಂಘಟನೆಗಳ ಸಹಯೋಗದೊಂದಿಗೆ 'ವಿಶ್ವ ತೆಂಗು ದಿನ 2026' ಅನ್ನು ದಿನಾಂಕ 02/09/2026 ರಂದು ಕೃಷಿ ವಿಜ್ಞಾನ ಕೇಂದ್ರ, ಕೋನೇಹಳ್ಳಿಯ ಆವರಣದಲ್ಲಿ ಆಚರಿಸಲಾಯಿತು. ಈ ಕಾರ್ಯಕ್ರಮವು ವೈಜ್ಞಾನಿಕ ತೆಂಗಿನ ಉತ್ಪಾದನೆ, ಸುಸ್ಥಿರ ಬೆಳೆ ನಿರ್ವಹಣೆ ಮತ್ತು ಸುಧಾರಿತ ತಂತ್ರಜ್ಞಾನಗಳ ಅಳವಡಿಕೆಗೆ ಒತ್ತು ನೀಡಿತು. ಕಾರ್ಯಕ್ರಮವನ್ನು ತುಮಕೂರು ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಮಂಜುನಾಥ್ ಅವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಬೆಂಗಳೂರಿನ ಅಟಾರಿಯ ಪ್ರಧಾನ ವಿಜ್ಞಾನಿ ಮತ್ತು ನೋಡಲ್ ಅಧಿಕಾರಿ ಡಾ. ಎಂ. ಜೆ. ಚಂದ್ರೇಗೌಡ, ಬೆಂಗಳೂರಿನ ಅಟಾರಿಯ ನಿವೃತ್ತ ಪ್ರಧಾನ ವಿಜ್ಞಾನಿಗಳಾದ ಡಾ. ಡಿ. ವಿ. ಶ್ರೀನಿವಾಸ ರೆಡ್ಡಿ ಮತ್ತು ಬೆಂಗಳೂರಿನ ಆರ್.ಹೆಚ್.ಆರ್.ಇ.ಎಸ್.ನ, ಸಂಶೋಧನೆ ಮತ್ತು ವಿಸ್ತರಣಾ ವಿಭಾಗದ ಸಹಾಯಕ ನಿರ್ದೇಶಕ ಡಾ. ಎಸ್. ಎಲ್. ಜಗದೀಶ್ ಅವರು ಉಪಸ್ಥಿತರಿದ್ದರು. ತೆಂಗಿನ ಉತ್ಪಾದನೆ ಮತ್ತು ಬೆಳೆ ನಿರ್ವಹಣೆಯ ಪ್ರಮುಖ ಅಂಶಗಳನ್ನು ಒಳಗೊಂಡ ತಾಂತ್ರಿಕ ಅಧಿವೇಶನಗಳು ಹಾಗೂ ರೈತರು–ತಜ್ಞರ ನಡುವಿನ ಸಂವಾದಗಳು ಕಾರ್ಯಕ್ರಮದ ಭಾಗವಾಗಿದ್ದವು. ತೆಂಗಿನ ಉತ್ಪಾದಕತೆಯನ್ನು ಹೆಚ್ಚಿಸುವ ಹಾಗೂ ಪ್ರಮುಖ ಕೀಟ ಮತ್ತು ರೋಗಗಳ ಸಮಸ್ಯೆಗಳನ್ನು ನಿರ್ವಹಿಸುವ ಕುರಿತು ರೈತರಿಗೆ ಪ್ರಾಯೋಗಿಕ ಜ್ಞಾನವನ್ನು ಒದಗಿಸಲು, ಸಮಗ್ರ ಪೋಷಕಾಂಶ ನಿರ್ವಹಣೆ ಮತ್ತು ಸಮಗ್ರ ಕೀಟ ಹಾಗೂ ರೋಗ ನಿರ್ವಹಣೆ ಕುರಿತು ಪದ್ಧತಿ ಪ್ರಾತ್ಯಕ್ಷಿಕೆಯನ್ನು ಕೈಗೊಳ್ಳಲಾಗಿತ್ತು. ತೆಂಗಿನ ಕೃಷಿಯಲ್ಲಿ ಮೌಲ್ಯವರ್ಧನೆ ಮತ್ತು ಸುಧಾರಿತ ತಂತ್ರಜ್ಞಾನಗಳ ಅಳವಡಿಕೆಯ ಅವಕಾಶಗಳನ್ನು ಪ್ರದರ್ಶಿಸಲು, ತೆಂಗಿನ ಆಧಾರಿತ ಮೌಲ್ಯವರ್ಧಿತ ಉತ್ಪನ್ನಗಳು ಮತ್ತು ತಾಂತ್ರಿಕ ಅಳವಡಿಕೆಗಳ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಅಂಗವಾಗಿ, ತೆಂಗಿನ ಕೃಷಿಯಲ್ಲಿ ಸುಧಾರಿತ ಪದ್ಧತಿಗಳನ್ನು ಅಳವಡಿಸಿಕೊಂಡ ಮತ್ತು ತಮ್ಮದೇ ಆದ ಕೊಡುಗೆ ನೀಡಿದ ಇಬ್ಬರು ಪ್ರಗತಿಪರ ತೆಂಗಿನ ರೈತರನ್ನು ಸನ್ಮಾನಿಸಲಾಯಿತು. ರೈತರು, ವಿಜ್ಞಾನಿಗಳು, ಅಧಿಕಾರಿಗಳು, ಸಂಬಂಧಿತ ಇಲಾಖೆಗಳ ಪ್ರತಿನಿಧಿಗಳು, ಕೈಗಾರಿಕಾ ವಲಯದವರು ಮತ್ತು ಇತರ ಪಾಲುದಾರರು ಸೇರಿದಂತೆ ಒಟ್ಟು 260 ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು





ಪಾರ್ಥೇನಿಯಂ ಜಾಗೃತಿ ಸಪ್ತಾಹ ಕಾರ್ಯಕ್ರಮ

ಕೃಷಿ ವಿಜ್ಞಾನ ಕೇಂದ್ರ, ಕೋನೇಹಳ್ಳಿ, ತಿಪಟೂರು, ತುಮಕೂರು ಜಿಲ್ಲೆಯು 'ಪಾರ್ಥೇನಿಯಂ ಜಾಗೃತಿ ಸಪ್ತಾಹ'ವನ್ನು ಎಲ್‌ಆರ್‌ಐಸಿ, ಕೋನೆಹಳ್ಳಿ, ಕನ್ನಡ ಭಾರತಿ ಪ್ರೌಢಶಾಲೆ ಹೊನ್ನವಳ್ಳಿ, ಹಾಗೂ ಹರಳಕಟ್ಟೆ, ಸಿ.ಎನ್. ಹಳ್ಳಿ ತಾಲ್ಲೂಕು ಇಲ್ಲಿ ದಿನಾಂಕ 16 ಆಗಸ್ಟ್ 2026 ರಿಂದ 22 ಆಗಸ್ಟ್ 2026 ರವರೆಗೆ ಆಯೋಜಿಸಲಾಯಿತು. ಈ ಕಾರ್ಯಕ್ರಮದ ಅವಧಿಯಲ್ಲಿ, ರೈತರ ಸಕ್ರಿಯ ಭಾಗವಹಿಸುವಿಕೆಯೊಂದಿಗೆ ಪಾರ್ಥೇನಿಯಂ ಹಿಸ್ಟೆರೋಫೋರಸ್‌ನ (ಕಾಂಗ್ರೆಸ್ ಹುಲ್ಲು) ದುಷ್ಪರಿಣಾಮಗಳು, ಅದರ ನಿಯಂತ್ರಣ ಕ್ರಮಗಳು, ಕಾಂಪೋಸ್ಟ್ ತಯಾರಿಕೆಯಲ್ಲಿ ಅದರ ಬಳಕೆ ಹಾಗೂ ಅದನ್ನು ಸುರಕ್ಷಿತವಾಗಿ ಕಿತ್ತುಹಾಕುವ ವಿಧಾನಗಳ ಕುರಿತು ರೈತರಿಗೆ ಅರಿವು ಮೂಡಿಸಲಾಯಿತು.





ತೆಂಗಿನಲ್ಲಿ ಸಮಗ್ರ ಕೀಟ ನಿರ್ವಹಣೆ ಕುರಿತು ಮುಂಚೂಣಿ ಪ್ರಾತ್ಯಕ್ಷಿಕೆ

ತುಮಕೂರಿನ ಕೊನೇಹಳ್ಳಿಯಲ್ಲಿರುವ ಕೃಷಿ ವಿಜ್ಞಾನ ಕೇಂದ್ರವು ಗುಬ್ಬಿಯ ತೋಟಗಾರಿಕೆ ಇಲಾಖೆಯ ಸಹಯೋಗದೊಂದಿಗೆ ತೆಂಗಿನಲ್ಲಿ ಸಮಗ್ರ ಕೀಟ ನಿರ್ವಹಣೆ ಕುರಿತು ಮುಂಚೂಣಿ ಪ್ರಾತ್ಯಕ್ಷಿಕೆಯನ್ನು ಗುಬ್ಬಿ ತಾಲ್ಲೂಕಿನ ದೊಣ್ಣೆರೆಯಲ್ಲಿ ದಿನಾಂಕ 16/09/2026 ರಂದು ಕೈಗೊಳ್ಳಲಾಯಿತು. ಈ ಕಾರ್ಯಕ್ರಮದ ಭಾಗವಾಗಿ, ತೆಂಗಿನ ತೋಟಗಳಲ್ಲಿ ಸಮಗ್ರ ಕೀಟ ಮತ್ತು ರೋಗ ನಿರ್ವಹಣೆ ಪದ್ಧತಿಗಳ ಕುರಿತು ಕೆವಿಕೆ ಕೀಟಶಾಸ್ತ್ರ ವಿಜ್ಞಾನಿಗಳಾದ ಶ್ರೀ. ಸಕ್ಲೈನ್ ಮುಸ್ತಾಕ್ ಫಲಾನುಭವಿ ರೈತರಿಗೆ ತಾಂತ್ರಿಕ ಮಾರ್ಗದರ್ಶನ ನೀಡಿದರು. ಆರೋಗ್ಯಕರ ತೆಂಗಿನ ಮರಗಳನ್ನು ನಿರ್ವಹಿಸಲು ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು ಅಗತ್ಯವಿರುವ ಪೋಷಕಾಂಶ ನಿರ್ವಹಣಾ ಪದ್ಧತಿಗಳ ಕುರಿತಾದ ಮಾಹಿತಿಯನ್ನೂ ಈ ತರಬೇತಿಯು ಒಳಗೊಂಡಿತ್ತು.





ಹುರುಳಿಯ ಸಮಗ್ರ ಬೆಳೆ ನಿರ್ವಹಣೆಯ ಗುಚ್ಚ ಮುಂಚೂಣಿ ಪ್ರಾತ್ಯಕ್ಷಿಕೆ



ತುಮಕೂರಿನ ಕೊನೇಹಳ್ಳಿಯಲ್ಲಿರುವ ಕೃಷಿ ವಿಜ್ಞಾನ ಕೇಂದ್ರವು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ನೆಲ ಜಲ ಎಫ್.ಪಿ.ಓ. ಸಹಯೋಗದಲ್ಲಿ ದಿನಾಂಕ 04/09/2026 ರಂದು ಹುರುಳಿಯ ಸಮಗ್ರ ಬೆಳೆ ನಿರ್ವಹಣೆಯ ಗುಚ್ಚ ಮುಂಚೂಣಿ ಪ್ರಾತ್ಯಕ್ಷಿಕೆಯನ್ನು ದೊಡ್ಡಪಾಳ್ಯದಲ್ಲಿ ಕೈಗೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಕೃಷಿ ವಿಸ್ತರಣೆ ವಿಜ್ಞಾನಿಗಳಾದ ಡಾ. ದರ್ಶನ್ ಎಂ.ಈ ರವರು ಬೀಜ ಸಂಸ್ಕರಣೆ, ಸಮತೋಲಿತ ಪೋಷಕಾಂಶಗಳ ನಿರ್ವಹಣೆ, ಜೈವಿಕ ಗೊಬ್ಬರದ ಬಳಕೆ, ಸಮಗ್ರ ಕೀಟ ಮತ್ತು ರೋಗ ನಿರ್ವಹಣೆ ಮತ್ತು ಇತರ ಸುಧಾರಿತ ಬೆಳೆ ಉತ್ಪಾದನಾ ತಂತ್ರಜ್ಞಾನಗಳ ಬಗ್ಗೆ ತಿಳಿಸಿಕೊಟ್ಟರು. ಕಾರ್ಯಕ್ರಮದ ಕೊನೆಯಲ್ಲಿ ಭಾಗವಹಿಸಿದ ರೈತರಿಗೆ ಹುರುಳಿ ಬೀಜ ಮತ್ತು ಜೈವಿಕ ಗೊಬ್ಬರಗಳನ್ನು ವಿತರಿಸಲಾಯಿತು.



ಪೌಷ್ಠಿಕ ಕೈತೋಟ ಕಾರ್ಯಕ್ರಮ

ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ಕೊನೇಹಳ್ಳಿಯಲ್ಲಿರುವ ಕೃಷಿ ವಿಜ್ಞಾನ ಕೇಂದ್ರವು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕತ್ತಿಕೆಹಾಳ್ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಬುಡಕಟ್ಟು ಉಪ ಯೋಜನೆ (ಟಿಎಸ್‌ಪಿ) ಅಡಿಯಲ್ಲಿ ಪೌಷ್ಠಿಕ ಕೈತೋಟ ಕಾರ್ಯಕ್ರಮವನ್ನು ದಿನಾಂಕ 04/09/2026 ರಂದು ಕೈಗೊಳ್ಳಲಾಯಿತು.









ಕಾರ್ಯಕ್ರಮದ ಅಂಗವಾಗಿ ಮನೆಯ ಮಟ್ಟದಲ್ಲಿ ಪೌಷ್ಠಿಕ ಕೈತೋಟಗಳನ್ನು ಸ್ಥಾಪಿಸಲು ಫಲಾನುಭವಿಗಳಿಗೆ ಬೀಜ ಕಿಟ್‌ಗಳು, ನರ್ಸರಿ ಸಸಿಗಳು ಮತ್ತು ನಾಟಿ ಸಾಮಗ್ರಿಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಗೃಹ ವಿಜ್ಞಾನಿಗಳಾದ ಕು. ಗಾನವಿ ಬಿ.ಆರ್. ರವರು ತಾಜಾ, ಸ್ಥಳೀಯವಾಗಿ ಉತ್ಪಾದಿಸಿದ ತರಕಾರಿಗಳನ್ನು ಬೆಳೆಯಲು ಮತ್ತು ಸೇವಿಸಲು ಕುಟುಂಬಗಳನ್ನು ಪ್ರೋತ್ಸಾಹಿಸುವ ಮೂಲಕ ಮನೆಯ ಪೌಷ್ಟಿಕತೆ, ಆಹಾರದ ವೈವಿಧ್ಯತೆ ಮತ್ತು ಆಹಾರ ಭದ್ರತೆಯನ್ನು ಉತ್ತೇಜಿಸುವ ಗುರಿಯನ್ನು ಈ ಉಪಕ್ರಮವು ಹೊಂದಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಪೌಷ್ಟಿಕಾಂಶ ಸಪ್ತಾಹದ ಸಂದರ್ಭದಲ್ಲಿ, ಫಲಾನುಭವಿಗಳಿಗೆ ಸಮತೋಲಿತ ಮತ್ತು ವೈವಿಧ್ಯಮಯ ಆಹಾರದ ಪ್ರಾಮುಖ್ಯತೆ ಮತ್ತು ಮನೆಯ ಪೌಷ್ಟಿಕಾಂಶವನ್ನು ಸುಧಾರಿಸುವಲ್ಲಿ ತಾಜಾ ತರಕಾರಿಗಳ ಪಾತ್ರದ ಬಗ್ಗೆಯೂ ಅರಿವು ಮೂಡಿಸಲಾಯಿತು.


ಪುನರಾವರ್ತಿತ ಸಂತಾನೋತ್ಪತ್ತಿ ಮತ್ತು ಗರ್ಭ ರೋಗಗಳ ನಿವಾರಣೆಗೆ ಪೌಷ್ಠಿಕಾಂಶಗಳ ಪಾತ್ರ ಕುರಿತು ತರಬೇತಿ ಕಾರ್ಯಕ್ರಮ

ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ಕೊನೇಹಳ್ಳಿಯಲ್ಲಿರುವ ಕೃಷಿ ವಿಜ್ಞಾನ ಕೇಂದ್ರವು ತಿಪಟೂರು ತಾಲ್ಲೂಕಿನ ಕೊನೇಹಳ್ಳಿಯಲ್ಲಿರುವ ಜಾನುವಾರು ಸಂಶೋಧನೆ ಮತ್ತು ಮಾಹಿತಿ ಕೇಂದ್ರದ (ಎಲ್‌ಆರ್‌ಐಸಿ) ಸಹಯೋಗದೊಂದಿಗೆ ಕೊನೇಹಳ್ಳಿಯ ಕೆವಿಕೆಯಲ್ಲಿ ಪುನರಾವರ್ತಿತ ಸಂತಾನೋತ್ಪತ್ತಿ ಮತ್ತು ಗರ್ಭ ರೋಗಗಳ ನಿವಾರಣೆಗೆ ಪೌಷ್ಠಿಕಾಂಶಗಳ ಪಾತ್ರ ಕುರಿತು ತರಬೇತಿ ಕಾರ್ಯಕ್ರಮವನ್ನು ದಿನಾಂಕ **29/09/2026**ರಂದು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಂತಾನೋತ್ಪತ್ತಿ ದಕ್ಷತೆ ಮತ್ತು ಹಿಂಡಿನ ಉತ್ಪಾದಕತೆಯನ್ನು ಸುಧಾರಿಸುವುದು. ಭಾಗವಹಿಸುವವರಿಗೆ ಸಮತೋಲಿತ ಆಹಾರ, ಸಾಕಷ್ಟು ಪೋಷಕಾಂಶಗಳ ಪೂರೈಕೆ ಮತ್ತು ಜಾನುವಾರುಗಳಲ್ಲಿ ಸಂತಾನೋತ್ಪತ್ತಿ ಆರೋಗ್ಯವನ್ನು ಕಾಪಾಡಿಕೊಳ್ಳಲು ಸುಧಾರಿತ ನಿರ್ವಹಣಾ ಪದ್ಧತಿಗಳ ಪ್ರಾಮುಖ್ಯತೆಯ ಬಗ್ಗೆ ಅರಿವು ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ಸುಮಾರು 45 ರೈತರು ತಾಂತ್ರಿಕ ಅಧಿವೇಶನಗಳು ಮತ್ತು ತಜ್ಞರೊಂದಿಗೆ ಸಂವಾದದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು,














ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ಮಣ್ಣು ಮತ್ತು ನೀರು ಪರೀಕ್ಷಾ ಪ್ರಯೋಗಾಲಯವು ರೈತರ ಸೇವೆಗಾಗಿ ಎನ್.ಎ.ಬಿ.ಎಲ್. ಮಾನ್ಯತೆ ಪಡೆದಿದೆ

ಮಣ್ಣು ಮತ್ತು ನೀರಿನ ಗುಣಮಟ್ಟವು ಕೃಷಿ ಉತ್ಪಾದನೆಯ ಪ್ರಮುಖ ಆಧಾರವಾಗಿದ್ದು, ವೈಜ್ಞಾನಿಕವಾಗಿ ಮಣ್ಣು ಮತ್ತು ನೀರಿನ ಪರೀಕ್ಷೆ ನಡೆಸಿ ಅದರ ಆಧಾರದ ಮೇಲೆ ಬೆಳೆ ನಿರ್ವಹಣಾ ಕ್ರಮಗಳನ್ನು ಕೈಗೊಳ್ಳುವುದು ಅತ್ಯಂತ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ರೈತರಿಗೆ ಗುಣಮಟ್ಟದ ಪರೀಕ್ಷಾ ಸೇವೆ ಒದಗಿಸುತ್ತಿರುವ ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರಿನ ಮಣ್ಣು ಮತ್ತು ನೀರು ಪರೀಕ್ಷಾ ಪ್ರಯೋಗಾಲಯವು ಮಣ್ಣಿನ ಮಾದರಿಗಳ ಪರೀಕ್ಷಾ ಫಲಿತಾಂಶಗಳ ನಿಖರತೆ ಮತ್ತು ವಿಶ್ವಾಸಾರ್ಹತೆಗಾಗಿ ಎನ್.ಎ.ಬಿ.ಎಲ್. ಮಾನ್ಯತೆ ಪಡೆದಿದೆ.

ಕೆವಿಕೆ ಕೊನೇಹಳ್ಳಿಯ ಮಣ್ಣು ಪರೀಕ್ಷಾ ಪ್ರಯೋಗಾಲಯದಲ್ಲಿ ಮಣ್ಣಿನ ರಸಸಾರ (ಪಿ.ಹೆಚ್), ವಿದ್ಯುತ್ ವಾಹಕತ್ವ (ಇ.ಸಿ.), ಮಣ್ಣಿನ ಸಾವಯವ ಇಂಗಾಲ (ಆರ್ಗ್ಯಾನಿಕ್ ಕಾರ್ಬನ್) ಸೇರಿದಂತೆ ಬೆಳೆಗಳ ಬೆಳವಣಿಗೆಗೆ ಅಗತ್ಯವಾದ ವಿವಿಧ ಪ್ರದಾನ ದ್ವಿತಿಯ ಹಾಗೂ ಲಘು ಸೂಕ್ಷ್ಮ ಪೋಷಕಾಂಶಗಳನ್ನು ವೈಜ್ಞಾನಿಕ ವಿಧಾನದಲ್ಲಿ ವಿಶ್ಲೇಷಿಸಲಾಗುತ್ತಿದೆ. ಇದರಿಂದ ಮಣ್ಣಿನ ಪೋಷಕಾಂಶ ಸ್ಥಿತಿ ಹಾಗೂ ಫಲವತ್ತತೆಯನ್ನು ತಿಳಿದುಕೊಂಡು, ಬೆಳೆಗಳಿಗೆ ಅಗತ್ಯವಿರುವ ರಸಗೊಬ್ಬರಗಳ ಪ್ರಮಾಣವನ್ನು ವೈಜ್ಞಾನಿಕವಾಗಿ ನಿರ್ಧರಿಸಲು ರೈತರಿಗೆ ನೆರವಾಗುತ್ತದೆ.

ಅದೇ ರೀತಿ, ಪ್ರಯೋಗಾಲಯದಲ್ಲಿ ನೀರಾವರಿಗೆ ಬಳಸುವ ನೀರಿನ ಗುಣಮಟ್ಟವನ್ನು ನಿರ್ಧರಿಸಲು ವಿವಿಧ ಪ್ರಮುಖ ಗುಣಲಕ್ಷಣಗಳನ್ನು ಪರೀಕ್ಷಿಸಲಾಗುತ್ತಿದೆ. ನೀರಿನ ಮಾದರಿಗಳಲ್ಲಿ ನೀರಿನ ರಸಸಾರ (ಪಿ.ಹೆಚ್.), ವಿದ್ಯುತ್ ವಾಹಕತೆ (ಇ.ಸಿ.), ಒಟ್ಟು ಕರಗಿದ ಘನಪದಾರ್ಥಗಳು (ಟಿ.ಡಿ.ಎಸ್.), ಕಾರ್ಬೋನೇಟ್, ಬೈಕಾರ್ಬೋನೇಟ್, ಕ್ಲೋರೈಡ್, ಸೋಡಿಯಂ, ಕ್ಯಾಲ್ಸಿಯಂ, ಮೆಗ್ನೀಷಿಯಂ, ಸೋಡಿಯಂ ಹೀರಿಕೊಳ್ಳುವ ಅನುಪಾತ (ಎಸ್.ಎ.ಆರ್) ಹಾಗೂ ಉಳಿಕೆ ಸೋಡಿಯಂ ಕಾರ್ಬೋನೇಟ್ (ಆರ್.ಎಸ್.ಸಿ) ಮುಂತಾದ ಅಂಶಗಳನ್ನು ವಿಶ್ಲೇಷಿಸಲಾಗುತ್ತಿದೆ. ಇದರಿಂದ ನೀರಿನ ಗುಣಮಟ್ಟವು ಕೃಷಿ ಹಾಗೂ ಮಣ್ಣಿನ ಮೇಲೆ ಬೀರುವ ಪರಿಣಾಮವನ್ನು ಸೂಕ್ತ ನೀರಾವರಿ ನಿರ್ವಹಣಾ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ.

ಕೆವಿಕೆ ಕೊನೇಹಳ್ಳಿಯ ಮಣ್ಣು ಮತ್ತು ನೀರು ಪರೀಕ್ಷಾ ಪ್ರಯೋಗಾಲಯದಲ್ಲಿ ಪ್ರತಿವರ್ಷ ಸುಮಾರು 900ರಿಂದ 1,000 ಮಣ್ಣು ಮತ್ತು ನೀರಿನ ಮಾದರಿಗಳನ್ನು ಪರೀಕ್ಷಿಸಲಾಗುತ್ತಿದೆ. ಪರೀಕ್ಷಾ ಫಲಿತಾಂಶಗಳ ಆಧಾರದ ಮೇಲೆ ರೈತರಿಗೆ ಮಣ್ಣಿನ ಪೋಷಕಾಂಶ ನಿರ್ವಹಣೆ, ಸಮತೋಲಿತ ರಸಗೊಬ್ಬರ ಬಳಕೆ, ಮಣ್ಣಿನ ಫಲವತ್ತತೆ ಸಂರಕ್ಷಣೆ ಹಾಗೂ ನೀರಿನ ಗುಣಮಟ್ಟಕ್ಕೆ ಅನುಗುಣವಾದ ನೀರಾವರಿ ನಿರ್ವಹಣೆ ಕುರಿತು ವೈಜ್ಞಾನಿಕ ಸಲಹೆಗಳನ್ನು ನೀಡಲಾಗುತ್ತಿದೆ.

ಎನ್.ಎ.ಬಿ.ಎಲ್. ಮಾನ್ಯತೆಯು ಪ್ರಯೋಗಾಲಯದ ಪರೀಕ್ಷಾ ಪ್ರಕ್ರಿಯೆಗಳ ಗುಣಮಟ್ಟ, ನಿಖರತೆ ಮತ್ತು ವಿಶ್ವಾಸಾರ್ಹತೆಗೆ ಮತ್ತಷ್ಟು ಬಲ ನೀಡಿದ್ದು, ತಿಪಟೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳ ರೈತರಿಗೆ ವೈಜ್ಞಾನಿಕ ಮಣ್ಣು ಮತ್ತು ನೀರು ನಿರ್ವಹಣೆಗೆ ಅಗತ್ಯವಾದ ವಿಶ್ವಾಸಾರ್ಹ ಸೇವೆಯನ್ನು ಒದಗಿಸುವಲ್ಲಿ ಕೆವಿಕೆ ಕೊನೇಹಳ್ಳಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ. ಶಂಕರ ಎಂ.ಹೆಚ್. ರವರು ತಿಳಿಸಿದ್ದಾರೆ.



National Accreditation Board for Testing and Calibration Laboratories
(A Constituent Board of Quality Council of India)
Recognition Program for Government Soil Testing Laboratories

CERTIFICATE OF RECOGNITION

Criteria: NABL 226 (Specific Criteria to Recognise Government Soil Testing Laboratory)
Certificate No. : NABL-GSTL-00618
Issue Date : 18-09-2026
Valid till : 17-09-2029

This certificate is valid for the scope as specified in annexure for fulfilment to the requirements of NABL.

SOIL TESTING LABORATORY, ICAR-KVK KONEHALLI
BIDERAGUDI KAVAL, KONEHALLI, TIPTUR, TUMAKURU, KARNATAKA

Signed for and on behalf of NABL

Anita Rani
DIRECTOR

ಒಳ ಆವರಣ ತರಬೇತಿ ಕಾರ್ಯಕ್ರಮಗಳು

ಕ್ರ.ಸಂ.	ದಿನಾಂಕ	ವಿಷಯ	ಸ್ಥಳ	ರೈತರ ಸಂಖ್ಯೆ
1	20/07/2026	ಔಷಧೀಯ ಸಸ್ಯಗಳ ಕುರಿತು ತರಬೇತಿ ಕಾರ್ಯಕ್ರಮ	ಕೆ.ವಿ.ಕೆ, ಕೊನೇಹಳ್ಳಿ	125
2	01/09/2026	ಕೀಟನಾಶಕಗಳ ಸುರಕ್ಷಿತ ಬಳಕೆ	ಕೆ.ವಿ.ಕೆ, ಕೊನೇಹಳ್ಳಿ	100

ಸಹಯೋಗ ತರಬೇತಿ ಕಾರ್ಯಕ್ರಮಗಳು

ಕ್ರ.ಸಂ.	ದಿನಾಂಕ	ವಿಷಯ	ಸಹಭಾಗಿತ್ವ ಸಂಸ್ಥೆ	ರೈತರ ಸಂಖ್ಯೆ
1	10/07/2026	ಸಾಮಾಜಿಕ ಅರಣ್ಯ ಕಾರ್ಯಕ್ರಮ	ಎಸ್.ಕೆ.ಡಿ.ಆರ್.ಡಿ.ಪಿ., ತಿಪಟೂರು	86
2	27/08/2026	ಆತ್ಮ ಅಡಿಯಲ್ಲಿ ಸಮತೋಲಿತ ರಸಗೊಬ್ಬರ ಬಳಕೆ ಮತ್ತು ನೈಸರ್ಗಿಕ ಕೃಷಿಯ ಕುರಿತು ರೈತ ವಿಜ್ಞಾನಿಗಳ ಸಂವಾದ	ಕೃಷಿ ಇಲಾಖೆ, ತುಮಕೂರು	30
3	02/09/2026	ವಿಶ್ವ ತೆಂಗಿನ ದಿನ	ಹೆಚ್.ಆರ್.ಇ.ಸಿ., ಅರಸೀಕೆರೆ	150
4	29/09/2026	ಪುನರಾವರ್ತಿತ ಸಂತಾನೋತ್ಪತ್ತಿ ಮತ್ತು ಗರ್ಭ ರೋಗಗಳ ನಿರ್ವಹಣೆಗೆ ಪೌಷ್ಟಿಕಾಂಶಗಳ ಪಾತ್ರ	ಎಲ್.ಆರ್.ಐ.ಸಿ., ಕೊನೇಹಳ್ಳಿ	55

ಹೊರ ಆವರಣ ತರಬೇತಿ ಕಾರ್ಯಕ್ರಮಗಳು

ಕ್ರ.ಸಂ.	ದಿನಾಂಕ	ವಿಷಯ	ಸ್ಥಳ	ರೈತರ ಸಂಖ್ಯೆ
1	13/08/2026	ಹರಳಿನ ಸುಧಾರಿತ ಉತ್ಪಾದನಾ ಪದ್ಧತಿಗಳು	ಎ.ಪಿ.ಎಂ.ಸಿ. ಯಾರ್ಡ್, ಹುಳಿಯಾರು, ಚಿ.ನಾ.ಹಳ್ಳಿ ತಾ.	30
2	13/08/2026	ಕೀಟನಾಶಕಗಳ ಸುರಕ್ಷಿತ ಬಳಕೆ	ಸೂಳೆಕೆರೆ, ತುರುವೇಕೆರೆ ತಾ.	50
3	17/08/2026	ಹಲಸಿನಕಾಯಿ ಮೌಲ್ಯವರ್ಧನೆ, ಬ್ಯಾಂಡಿಂಗ್ ಮತ್ತು ಮಾರ್ಕೆಟಿಂಗ್	ಸೌಪರ್ಣಿಕ ಸ್ವಸಹಾಯ ಗುಂಪು, ಚಿ. ನಾ. ಹಳ್ಳಿ ತಾ.	38
4	04/09/2026	ಬೀನ್ಸ್ ಸಮಗ್ರ ಬೆಳೆ ನಿರ್ವಹಣೆ	ದೊಡ್ಡಪಾಳ್ಯ, ಚಿ. ನಾ. ಹಳ್ಳಿ ತಾ.	50
5	09/09/2026	ಗುಣಮಟ್ಟದ ಎಲೆ ಇಳುವರಿ ಉತ್ಪಾದನೆಗಾಗಿ ಹಿಪ್ಪುನೇರಳೆಯಲ್ಲಿ ಮಣ್ಣಿನ ಮಾದರಿ ಮತ್ತು ಸಮಗ್ರ ಪೋಷಕಾಂಶ ನಿರ್ವಹಣಾ ಪದ್ಧತಿಗಳು	ಶ್ರೀರಾಮನಹಳ್ಳಿ, ತಿಪಟೂರು ತಾ.	60
6	16/09/2026	ತೆಂಗಿನಕಾಯಿಯಲ್ಲಿ ಸಮಗ್ರ ಪೋಷಕಾಂಶ ನಿರ್ವಹಣೆ ಮತ್ತು ಕೀಟ ಮತ್ತು ರೋಗ ನಿರ್ವಹಣೆ	ದೊಣ್ಣೆರೆ, ಗುಬ್ಬಿ ತಾ.	28

ಪ್ರಮುಖ ದಿನಗಳ ಆಚರಣೆ

ಕ್ರ.ಸಂ.	ದಿನಾಂಕ	ವಿಷಯ	ಸ್ಥಳ	ರೈತರ ಸಂಖ್ಯೆ
1	30–31/07/2026	ವಿಸ್ಮಯ ಕೀಟ ಪ್ರಪಂಚ	ಕೆಐಟಿ ಕಾಲೇಜು, ತಿಪಟೂರು ತಾ.	4500
2	17/08/2026	ಪಾರ್ಥೇನಿಯಂ ಜಾಗೃತಿ ಸಪ್ತಾಹ ಮತ್ತು ನಿರ್ಮೂಲನಾ ಅಭಿಯಾನ	ಕೆ.ವಿ.ಕೆ., ಕೊನೇಹಳ್ಳಿ, ತಿಪಟೂರು ತಾ.	49
3	18/08/2026	ಪಾರ್ಥೇನಿಯಂ ಜಾಗೃತಿ ಸಪ್ತಾಹ	ಎಲ್.ಆರ್.ಐ.ಸಿ., ಕೊನೇಹಳ್ಳಿ, ತಿಪಟೂರು ತಾ.	38
4	19/08/2026	ಪಾರ್ಥೇನಿಯಂ ನಿರ್ಮೂಲನಾ ಅಭಿಯಾನ	ಕೆ.ವಿ.ಕೆ., ಕೊನೇಹಳ್ಳಿ, ತಿಪಟೂರು ತಾ.	44
5	20/08/2026	ಪಾರ್ಥೇನಿಯಂ ಜಾಗೃತಿ ಸಪ್ತಾಹ ಮತ್ತು ನಿರ್ಮೂಲನಾ ಅಭಿಯಾನ	ಕನ್ನಡ ಭಾರತಿ ಪ್ರೌಢಶಾಲೆ, ಹೊನೆಹಳ್ಳಿ	42
6	21/08/2026	ಪಾರ್ಥೇನಿಯಂ ಜಾಗೃತಿ ಸಪ್ತಾಹ	ಕೆ.ವಿ.ಕೆ., ಕೊನೇಹಳ್ಳಿ, ತಿಪಟೂರು ತಾ.	38
7	22/08/2026	ಪಾರ್ಥೇನಿಯಂ ನಿರ್ಮೂಲನಾ ಅಭಿಯಾನ	ಹರಳಕಟ್ಟೆ, ಚಿ.ನಾ. ಹಳ್ಳಿ ತಾ.	40
8	02/09/2026	ವಿಶ್ವ ತೆಂಗಿನ ದಿನ	ಕೆ.ವಿ.ಕೆ., ಕೊನೇಹಳ್ಳಿ, ತಿಪಟೂರು ತಾ.	150
9	13/09/2026	ಕೆವಿಕೆಯಲ್ಲಿ ರೈತರನ್ನುದ್ದೇಶಿಸಿ ಗೌರವಾನ್ವಿತ ಕೇಂದ್ರ ಕೃಷಿ ಸಚಿವರು ನಡೆಸುವ ಭಾಷಣದ ನೇರ ಪ್ರಸಾರ	ಕೆ.ವಿ.ಕೆ., ಕೊನೇಹಳ್ಳಿ, ತಿಪಟೂರು ತಾ.	30
10	17/09/2026 ರಿಂದ 02/10/2026	ಸ್ವಚ್ಛತಾ ಹೀ ಸೇವಾ ಅಭಿಯಾನ 2026	ಕೆ.ವಿ.ಕೆ., ಕೊನೇಹಳ್ಳಿ, ತಿಪಟೂರು ತಾ.	255

ಪದ್ಧತಿ ಪ್ರಾತ್ಯಕ್ಷಿಕೆಗಳು

ಕ್ರ.ಸಂ.	ದಿನಾಂಕ	ವಿಷಯ	ಸ್ಥಳ	ರೈತರ ಸಂಖ್ಯೆ
1	20/08/2026	ಶುಂಠಿ ಬೆಳೆಯ ರೋಗ ನಿರ್ವಹಣೆಗಾಗಿ ಟೈಕೋ ಕ್ಯಾಪ್ಸೂಲ್ ಬಳಕೆಯ ಪದ್ಧತಿ ಪ್ರಾತ್ಯಕ್ಷಿಕೆ	ತಿಪಟೂರು, ತಿಪಟೂರು ತಾ.	21
2	01/09/2026	ಕೊಟ್ಟಿಗೆ ಗೊಬ್ಬರ ಮತ್ತು ರಸಗೊಬ್ಬರ ನೀಡುವಿಕೆಯ ಪದ್ಧತಿ ಪ್ರಾತ್ಯಕ್ಷಿಕೆ	ಕೆವಿಕೆ, ಕೊನೇಹಳ್ಳಿ, ತಿಪಟೂರು ತಾ.	18
3	01/09/2026	ತೆಂಗಿನ ಮರಕ್ಕೆ ಬೇರಿನ ಮೂಲಕ ಪೋಷಕಾಂಶ ನೀಡುವಿಕೆಯ ಪದ್ಧತಿ ಪ್ರಾತ್ಯಕ್ಷಿಕೆ	ಕೆವಿಕೆ, ಕೊನೇಹಳ್ಳಿ, ತಿಪಟೂರು ತಾ.	21
4	02/09/2026	ರಸಗೊಬ್ಬರ ನೀಡುವಿಕೆಯ ಪದ್ಧತಿ ಪ್ರಾತ್ಯಕ್ಷಿಕೆ	ಕೆವಿಕೆ, ಕೊನೇಹಳ್ಳಿ, ತಿಪಟೂರು ತಾ.	19

ಸಮಸ್ಯಾತ್ಮಕ ಕ್ಷೇತ್ರ ಭೇಟಿ

ಕ್ರ. ಸಂ.	ದಿನಾಂಕ	ವಿಷಯ	ಸ್ಥಳ	ರೈತರ ಸಂಖ್ಯೆ
1	17/08/2026	ಕಾಂಡ ಕೊರೆಯುವ ಹುಳದ ಬಾಧೆಗೊಳಗಾದ ಬಾಳೆ ತೋಟಕ್ಕೆ ಕ್ಷೇತ್ರ ಭೇಟಿ	ಬಿದರೇಗುಡಿ, ತಿಪಟೂರು ತಾ.	8
2	17/08/2026	ಹೂ ಉದುರುವಿಕೆ ಮತ್ತು ವಿರೂಪಗೊಳ್ಳುವ ಸಮಸ್ಯೆಯಿರುವ ಪಪ್ಪಾಯಿ ತೋಟಕ್ಕೆ ಕ್ಷೇತ್ರ ಭೇಟಿ	ನಾಗತೀಹಳ್ಳಿ, ತಿಪಟೂರು ತಾ.	19
3	18/08/2026	ವಿವಿಧ ಗ್ರಾಮಗಳಲ್ಲಿ ಬರ ಪರಿಸ್ಥಿತಿಯ ವಿಶ್ಲೇಷಣೆ ಕ್ಷೇತ್ರ ಭೇಟಿ	ತಿಪಟೂರು ತಾ.	36
4	01/09/2026	ತೆಂಗಿನ ತೋಟಕ್ಕೆ ರೋಗನಿರ್ಣಯದ ಕ್ಷೇತ್ರ ಭೇಟಿ	ಗುರುಗಡಹಳ್ಳಿ, ತಿಪಟೂರು ತಾ.	9
5	09/09/2026	ಬಾಡಿದ ರೋಗದ ಬಾಧೆಗೊಳಗಾದ ಮೆಣಸಿನ ಬಳ್ಳಿ ತೋಟಕ್ಕೆ ಕ್ಷೇತ್ರ ಭೇಟಿ	ಗುಬ್ಬಿ, ಗುಬ್ಬಿ ತಾ.	8
6	09/09/2026	ಗುಬ್ಬಿಯಲ್ಲಿ ಕಾಂಡದಿಂದ ದ್ರವ ರಸ ಸೋರುವ ಸಮಸ್ಯೆಯಿರುವ ತೆಂಗಿನ ತೋಟಕ್ಕೆ ಕ್ಷೇತ್ರ ಭೇಟಿ	ಗುಬ್ಬಿ, ಗುಬ್ಬಿ ತಾ.	8
7	09/09/2026	ರಿಂಗ್ ಸ್ಪಾಟ್ ವೈರಸ್ ಬಾಧಿತ ಪಪ್ಪಾಯಿ ತೋಟಕ್ಕೆ ರೋಗನಿರ್ಣಯದ ಕ್ಷೇತ್ರ ಭೇಟಿ	ತುರುವೇಕೆರೆ, ತುರುವೇಕೆರೆ ತಾ.	7
8	11/09/2026	ಶುಂಠಿ ತೋಟಕ್ಕೆ ರೋಗನಿರ್ಣಯದ ಕ್ಷೇತ್ರ ಭೇಟಿ	ಗುರುಗಡಹಳ್ಳಿ, ತಿಪಟೂರು ತಾ.	9
9	24/09/2026	ಗೆಡ್ಡೆ ಕೊಳೆ ರೋಗದ ಬಾಧೆಗೊಳಗಾದ ಶುಂಠಿ ತೋಟಕ್ಕೆ ರೋಗನಿರ್ಣಯದ ಕ್ಷೇತ್ರ ಭೇಟಿ	ಚಿಕ್ಕಹೊನ್ನವಳ್ಳಿ, ತಿಪಟೂರು ತಾ.	8
10	25/09/2026	ಸಿಗಟೋಕಾ ರೋಗದ ಬಾಧೆಗೊಳಗಾದ ಬಾಳೆ ತೋಟಕ್ಕೆ ರೋಗನಿರ್ಣಯದ ಕ್ಷೇತ್ರ ಭೇಟಿ	ಬಿದರೇಗುಡಿ, ತಿಪಟೂರು ತಾ.	11

ಪ್ರಧಾನ ಸಂಪಾದಕರು :	ಡಾ. ಎಂ. ಹೆಚ್. ಶಂಕರ
ಸಹ ಸಂಪಾದಕರು :	ಡಾ. ಹೆಚ್.ಬಿ. ಶಿವಪ್ಪ ನಾಯಕ, ಡಾ. ತಸ್ಮಿಯಾ ಕೌಸರ್ ಡಾ. ದರ್ಶನ್ ಎಂ.ಈ, ಡಾ. ಕೀರ್ತಿಶಂಕರ್ ಕೆ, ಕು. ಗಾನವಿ ಬಿ.ಆರ್. ಶ್ರೀ. ಸಕ್ಲೈನ್ ಮುಸ್ತಾಕ್
ಸಹಾಯಕ ಸಂಪಾದಕರು :	ಡಾ. ಸತೀಶ್. ಹೆಚ್.ಎಸ್, ಕು. ಶಮಾ ನಾಜ್
ಪುಟ ವಿನ್ಯಾಸ ಮತ್ತು ಬೆರಳಚ್ಚುಗಾರ :	ಪ್ರದೀಪ್ ಕುಮಾರ್ ಹೆಚ್.

ಪ್ರಕಾಶಕರು:

ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಐ.ಸಿ.ಎ.ಆರ್ –ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು, ತುಮಕೂರು ಜಿಲ್ಲೆ